## ವಾರ್ತಾ ವಿಶ್ಲೇಷಣೆ

### ಕೈ ಕೆಸರಾದರೆ ಬಾಯ್ಮೊಸರು

'ಕೈ ಕೆಸರಾದರೆ ಬಾಯ್ಮೊಸರು' ಎಂಬ ಗಾದೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಫಲರಾದ ರೈತರು ನಂಜನಗೂಡು ತಾಲ್ಲೂಕಿನ ಮಲ್ಲಯ್ಯನ ಕುಟುಂಬದವರು. ರೈತರ ಆತ್ಮಹತ್ಯೆ ಸುದ್ದಿಯು ಪ್ರತಿನಿತ್ಯವೂ ಪತ್ರಿಕೆಗಳಲ್ಲಿ ವರದಿಯಾಗುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಬಾರದ ಮಳೆ, ಸಾಲದ ಹೊರೆ ಹಾಗೂ ಮಾರುಕಟ್ಟೆಯ ಏರಿಳಿತಗಳ ವೈಪರೀತ್ಯಗಳಿಂದ ದಿಕ್ಕೆಟ್ಟಿರುವ ರೈತರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅಂತೆಯೇ ಮುಚ್ಚಿಹೋಗುತ್ತಿರುವ ಹಲವಾರು ಕೈಗಾರಿಕೆಗಳು, ಉದ್ಯಮಗಳು ನಿರುದ್ಯೋಗದ ಸಮಸ್ಯೆಯನ್ನು ಜಟಿಲವಾಗಿಸಿವೆ. ಹಲವಾರು ವರ್ಷಗಳ ಕಾಲ ಒಂದು ಕಾರ್ಖಾನೆಯಲ್ಲಿ ದುಡಿದು ಅದು ಮುಚ್ಚಿಹೋದಾಗ, ಇತರ ಕಸುಬುಗಳ ಬಗ್ಗೆ ಮಾಹಿತಿಯಿಲ್ಲದ ಕಾರ್ಮಿಕರು ಜೀವನೋಪಾಯಕ್ಕೆ ಏನು ತಾನೇ ಮಾಡಬೇಕು?



ಐಡಿಯಲ್ ಜಾವಾ ಕಾರ್ಖಾನೆಯಲ್ಲಿ ಕ್ವಾಲಿಟಿ ಕಂಟ್ರೋಲರ್ ಆಗಿದ್ದ ಮಲ್ಲಯ್ಯ, ಮೂವತ್ತು ವರ್ಷಗಳ ಕಾಲ ಅಲ್ಲಿ ದುಡಿದು, ದಿಢೀರನೆ ಕಾರ್ಖಾನೆ ಮುಚ್ಚಿದ್ದರಿಂದ ಕೆಲಸವಿಲ್ಲದೆ ಜೀವನ ಸಾಗಿಸಲು ಹೆಣಗಾಡಬೇಕಾಯಿತು. ಮುಂದೇನು ಎಂಬ ಚಿಂತೆಯಲ್ಲಿದ್ದ ಈ ಇಂಜಿನಿಯರ್ ತಮ್ಮಂದಿರ ಸಲಹೆಯಂತೆ ಒಂದು ಪಾಳು ಜಮೀನನ್ನು ಖರೀದಿಸಿ, ಕೃಷಿಗೆ ಕೈಹಾಕಿದರು. ಭವಿಷ್ಯನಿಧಿಯ (ಪಿ.ಎಫ್.) ಹಣದಿಂದ ಆರು ಎಕರೆ ಜಮೀನು ಖರೀದಿಸಿ, ಜಮೀನಿನ ಮಧ್ಯೆ ಸಣ್ಣದೊಂದು ಗುಡಿಸಲು ಕಟ್ಟಿಕೊಂಡ ಮಲ್ಲಯ್ಯ ರುಡ್‌ಸೆಟ್‌ನಿಂದ ಹಿಪ್ಪುನೇರಳೆ ತರಬೇತಿ ಪಡೆದು, ಹಿಪ್ಪುನೇರಳೆ ಕೃಷಿ ಪ್ರಾರಂಭಿಸಿದರು.

ಹೀಗೆ ಹೊಸ ಉದ್ಯೋಗದಲ್ಲಿ ತೊಡಗಿದ ಮಲ್ಲಯ್ಯ ಸಾಂಪ್ರದಾಯಿಕ ಬೇಸಾಯ ಪದ್ಧತಿಗೆ ಶರಣಾಗದೆ ತಂತ್ರಜ್ಞಾನದ ಮೊರೆಹೋದರು. ಇವರ ನೆರವಿಗೆ ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನಾ ಕೇಂದ್ರ ಮುಂದಾಯಿತು. ಇದರಿಂದ ಉತ್ಸಾಹಿತರಾಗಿ ಇವರು ಬೈವೋಲ್ಟೈನ್ ಎಂಬ ನೂತನ ತಳಿಯ ರೇಷ್ಮೆಗೂಡಿನ ಉತ್ಪಾದನೆಯಲ್ಲಿ ತೊಡಗಿದರು. ಆರಂಭದಲ್ಲಿ ತೊಂದರೆಗಳಾದರೂ ಈಗ ಅವರು ತಮ್ಮ ಕೆಲಸದಲ್ಲಿ ಯಶಸ್ವಿಯಾಗಿದ್ದಾರೆ. ಇತ್ತೀಚೆಗೆ ನೈಸರ್ಗಿಕ ಕೃಷಿಯ ಅಧ್ವರ್ಯುಗಳಾದ ಸುಭಾಷ್ ಪಾಳೇಕರ್ ಅವರಿಂದ ಪ್ರಭಾವಿತರಾಗಿ ಎರಡು ವರ್ಷಗಳಿಂದ ರೇಷ್ಮೆಯನ್ನು ನೈಸರ್ಗಿಕ ವಿಧಾನಗಳಿಂದ ಬೆಳೆಯುತ್ತಿದ್ದಾರೆ. ಬತ್ತ, ಬಾಳೆ, ಟೊಮೇಟೊ ಮುಂತಾದುವುಗಳನ್ನೂ ಬೆಳೆಯುತ್ತಿದ್ದಾರೆ. ಜೊತೆಗೆ ಆಧುನಿಕ ಪದ್ಧತಿಯಲ್ಲಿ ಒಂಬತ್ತು ಸಾವಿರ ಕೋಳಿಗಳನ್ನು ಸಾಕುತ್ತ, ತಿಪ್ಪೆಗೆ ಸುರಿಯುತ್ತಿದ್ದ ರೇಷ್ಮೆ ಬೆಳೆಯ ಕಸಕಡ್ಡಿಗಳನ್ನು ಹದಿನೆಂಟು ಕುರಿಗಳ ಆಹಾರವಾಗಿ ಬಳಸುತ್ತಿದ್ದಾರೆ. ಎರಡು ಜೆರ್ಸಿ ಹಸು ಹಾಗೂ ಏಳು ನಾಟಿ ಹಸುಗಳನ್ನೂ ಸಾಕಿದ್ದಾರೆ.

ಕೃಷಿ ನಂಬಿದರೆ ನಷ್ಟ ಎಂದು ಹೆಚ್ಚಿನ ಜನ ಹೇಳುತ್ತಿರುವಾಗ ವ್ಯವಸ್ಥಿತವಾಗಿ ಕೆಲಸ ಮಾಡಿದರೆ ಕೃಷಿ ಲಾಭದಾಯಕ ಎಂಬುದನ್ನು ತೋರಿಸಿದ್ದಾರೆ. ಕೃಷಿಯಿಂದ ವರ್ಷಕ್ಕೆ ಮೂರರಿಂದ ನಾಲ್ಕು ಲಕ್ಷ ರೂ.ಗಳ ಲಾಭ ಮಾಡುತ್ತಿರುವ ಈ ಕುಟುಂಬದ ಎಲ್ಲ ಸದಸ್ಯರೂ ಇವರೊಂದಿಗೆ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಇವರ ಶ್ರಮ, ನಿಷ್ಠೆ ಹಾಗೂ ಪ್ರಗತಿಪರ ಆಲೋಚನೆ ಇತರರಿಗೂ ಮಾರ್ಗದರ್ಶಕವಾದರೆ ದೇಶದ ಅನೇಕ ಕೃಷಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ದೊರೆಯಬಹುದು. 'ವಿಜಯ ಕರ್ನಾಟಕ'(ದಿನಾಂಕ ೨೦.೧೨.೨೦೦೬)ಹಾಗೂ 'ದಿ ಹಿಂದೂ' (ದಿನಾಂಕ ೨೧.೧೨.೨೦೦೬) ಪತ್ರಿಕೆಗಳಲ್ಲಿ ಇವರ ಯಶೋಗಾಥೆಯನ್ನು ವರದಿ ಮಾಡಲಾಗಿದೆ. **'ಕೃಷಿತೋ ನಾಸ್ತಿ ದುರ್ಭಿಕ್ಷಂ'** ಎಂಬ ಹಳಬರ ಮಾತು ಮತ್ತೆ ಚಲಾವಣೆಗೆ!

ಕೃಷಿಕನ ದರಿದ್ರ ನಿವಾಸದಿಂದ ನೇಗಿಲನ್ನು ಹಿಡಿದು ನವೀನ ಭಾರತವು ಮೈದೋರಲಿ. ಬೆಸ್ತನ ಜೋಪಡಿಯಿಂದ, ಚಮ್ಮಾರ, ಜಾಡಮಾಲಿಗಳ ಬಡ ಗುಡಿಸಿಲಿನಿಂದ, ಅದು ಹೊರಹೊಮ್ಮಲಿ. ಮಳಿಗೆಯಿಂದ, ಕಾರ್ಖಾನೆಯಿಂದ, ಅಂಗಡಿಯಿಂದ, ಸಂತೆಯಿಂದ ಭಾರತಮಾತೆ ಪ್ರತ್ಯಕ್ಷವಾಗಲಿ. ಪರ್ವತಕಾನನಗಳಿಂದ, ಕಂದರ ವನಗಳಿಂದ ನವಭಾರತದ ಮೂರ್ತಿ ರೂಪುಗೊಳ್ಳಲಿ.

-ಸ್ವಾಮಿ ವಿವೇಕಾನಂದ